**ದಿನಾಂಕಃ 29.04.2025** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

ನಾನು ಹಾಜರು ಪಡಿಸಿರುವ ಕ್ರಯ ಪತ್ರ ದಲ್ಲಿ ನಿವೇಶನ ಸಂಖ್ಯೆ 39 ಎಂದು ನಮೂದಾಗಿರುತ್ತದೆ. ನಾವು ವಾದಿಯ ಮೇಲೆ ದಾವಾ ಸ್ವತ್ತನ್ನು ಕುರಿತು ಮಾಲಿಕತ್ವ ಹಾಗು ಶಾಶ್ವತ ನಿರ್ಬಂಧಕಾಜ್ಞೆ ಕೋರಿ 2013 ನೇ ಸಾಲಿನಲ್ಲಿ ಓ.ಎಸ್ ನಂ. 267/2013 ದಾವೆಯನ್ನು ಹೂಡಿದ್ದೇವು ಎಂದರೆ ಸರಿ. ಸದರಿ ದಾವೆಯಲ್ಲಿ ವಿಚಾರಣೆ ಆಯಿತು ಎಂದರೆ ಸರಿ. ಸದರಿ ದಾವೆ ವಜಾಗೊಂಡ ಕಾರಣ ಆರ್.ಎ.64/2019 ಮೇಲ್ಮನವಿಯನ್ನು ಹೂಡಿದ್ದೇವೆ ಎಂದರೆ ಸರಿ. ಪ್ರಸ್ತುತ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ಓ.ಎಸ್ ನಂ. 267/2013 ಸಹ ಹಾಜರು ಪಡಿಸಿದ್ದೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾಖಲೆಗಳನ್ನು ನನ್ನ ಯಜಮಾನರು ನೀಡಿದ್ದರು ಎಂದು ನುದಿಡಿರುತ್ತಾರೆ. ನಾನು ಹಾಜರು ಪಡಿಸಿರುವ ಫೋಟೋಗಳ ನೆಗೆಟಿವ್ ಅಥವಾ ಪೆನ್ ಡ್ರೈವ್ ನನ್ನ ಬಳಿ ಇರುವುದಿಲ್ಲ. ನಾನು ಹಾಜರು ಪಡಿಸಿರುವಂತಹ ಎರಡೂ ಆಧಾರ್ ಕಾರ್ಡ್ ನಲ್ಲಿ ವಿಳಾಸವು ಹೊನ್ನವಳ್ಳಿ ಗ್ರಾಮ, ತಿಪಟೂರು ತಾಲ್ಲೂಕು ಎಂದು ಇದೆ ಎಂದರೆ ಸರಿ. ವಂಶವೃಕ್ಷವನ್ನು ನಾನೇ ಪ್ರಮಾಣ ಪತ್ರವನ್ನು ಕೊಟ್ಟು ತಹಸಿಲ್ದಾರ್ ರವರಿಂದ ಪಡೆದಿರುತ್ತೇನೆ ಎಂದರೆ ಸರಿ. ನನ್ನ ಅತ್ತೆ ಜಯಲಕ್ಷ್ಮಮ್ಮ ರವರಿಗೆ ಹೆಣ್ಣು ಮಕ್ಕಳು ಇರುವುದಿಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇಲ್ಲ ಎಂದರೆ ಹಾಗೂ ಅದರ ಮಾಲೀಕರಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ಹೊರತ್ತು ಪಡಿಸಿ ಬೇರೆ ಯಾವ ದಾಖಲೆಗಳಲಿಲ್ಲ ಎಂದರೆ ಸರಿ. ವಾದಿಯ ಹೆಸರಿಗೆ ಆಗಿರುವ ಖಾತೆಯನ್ನು ಪ್ರಶ್ನಿಸಿ ನಾನು ಇಲ್ಲಿಯವರೆಗೂ ಡಿಸಿ ಅಥವಾ ಎಸಿ ಮುಂದೆ ಮನವಿ ಸಲ್ಲಿಸಿಲ್ಲ ಎಂದರೆ ಸರಿ. ವಾದಿ ತುಮಕೂರಿನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಸ್ವತ್ತುನ್ನು ಒತ್ತುವರಿ ಮಾಡುವ ಉದ್ದೇಶದಿಂದ ತಾತ್ಕಾಲಿಕ ತೆಂಗಿನ ಗರಿಯಿಂದ ಶೆಡ್ ಅನ್ನು ನಿರ್ಮಿಸಿದ್ದೇವೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವು ಸ್ವಾಧೀನದಲ್ಲಿದ್ದೆವು. ನಮ್ಮ ಮಾವ ರವರ ಮೃತ ಪಟ್ಟ ನಂತರ ಬಾಡಿಗೆಗೆ ನೀಡಿರುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ಯಜಮಾನರು ಬಾಡಿಗೆಗೆ ನೀಡಿದ್ದ ಕಾರಣ ಯಾರಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದು ನನಗೆ ತಿಳಿದಿಲ್ಲ. ನಾವು ತಾತ್ಕಾಲಿಕ ತೆಂಗಿನ ಗರಿಯಿಂದ ಶೆಡ್ ಅನ್ನು ನಿರ್ಮಿಸಿದ್ದೇವೆ ಎಂದು ವಾದಿಯು ಪೊಲೀಸ್

ಠಾಣೆಯಲ್ಲಿ ನಮ್ಮ ವಿರುದ್ಧ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ವಾದಿಯ ವಿರುದ್ದ ದೂರನ್ನು ನೀಡಿದ್ದೇವು ಎಂದು ನುಡಿದಿರುತ್ತಾರೆ. ಅದರ ಸ್ವೀಕೃತಿಯನ್ನು ನೀಡಿದ್ದೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾವು ವಾದಿಯ ವಿರುದ್ದ ದೂರನ್ನು ನೀಡಿದ್ದೇವು ಎಂದು ಹೇಳಿದ್ದೆನು ಎಂದರೆ ಸರಿ. ವಾದಿಯ ವಿರುದ್ದ ನಾವು ನೀಡಿದ್ದ ದೂರಿಗೆ ಪೊಲೀಸರ ಕ್ರಮ ಜರುಗಿಸಿ ಕೊಟ್ಟಿದ್ದಾರೆ ಎಂದರೆ ಸರಿ. ಆ ದಾಖಲೆಯನ್ನು ನ್ಯಾಯಾಲಯಕ್ಕೆ ನನ್ನ ಗಂಡ ಹಾಜರು ಪಡಿಸಿರುತ್ತಾರೆ, ಸದರಿ ದಾಖಲೆಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನನಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ವಾದಿಯ ಸ್ವತ್ತನ್ನು ಪಡೆಯಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/–

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಶಿರಾ.